

ಅರುಣ ಪಿ. ಭಟ್ಟ

## 19.9.2019 ರಿಂದ 25.9.2019ರವರೆಗೆ.




ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ವೆಚ್ಚ ಏರಿದರೂ ಆದಾಯದಲ್ಲಿ ಹೆಚ್ಚಳ. ನಿಮ್ಮ ಮನೆಯಲ್ಲಿ ಸಾಮರಸ್ಯ ತರಲು ನಿಕಟ ಸಹಕಾರದೊಂದಿಗೆ ಕೆಲಸ ಮಾಡಿ. ನಿಮ್ಮ ಸ್ಪರ್ಧಾತ್ಮಕ ಸ್ವಭಾವ ಸಹಾಯ ಮಾಡುತ್ತದೆ.

**ಶುಭದಿನ:** 20 ಶ್ರೀ ದುರ್ಗಾ ಆರಾಧನೆ ಮಾಡಿರಿ.




ವಾರದ ಶುರುವಿನಿಂದಲೇ ಉತ್ತಮ ಅವಕಾಶ. ಸರಿಯಾದ ಸಮಯಕ್ಕೆ ಕೆಲಸ ಕಾರ್ಯಗಳು ಪೂರ್ಣಗೊಳ್ಳಲಿವೆ. ಮಕ್ಕಳಿಗೆ ಸಹಾಯ ಮಾಡಲಿದ್ದೀರಿ. ಕುಟುಂಬದಲ್ಲಿ ಹಲವು ಬದಲಾವಣೆ ತರುವ ಮೂಲಕ ಸಂತೋಷ ಉಂಟು ಮಾಡಲಿದ್ದೀರಿ.

**ಶುಭದಿನ:** 22. ಹನುಮಾನ್ ಚಾಲೀಸ್ ಓದಿರಿ.




ದಾನ ಧರ್ಮದಲ್ಲಿ ಆಸಕ್ತಿ. ತಾಯಿಯ ಅನಾರೋಗ್ಯ. ಉತ್ತಮ ವರಮಾನ ಇರುತ್ತದೆ. ಇದರಿಂದ ನಿಮ್ಮ ಆತ್ಮವಿಶ್ವಾಸ ಹೆಚ್ಚಾಗುತ್ತದೆ ಸಂತೋಷ ಕೂಡ ಉಂಟಾಗುತ್ತದೆ. ನಿಮ್ಮ ಜೀವನಶೈಲಿ ಮತ್ತಷ್ಟು ಉತ್ತಮಗೊಳ್ಳುತ್ತದೆ.

**ಶುಭದಿನ:** 21 ಗಣಪತಿಗೆ 108 ದೂರ್ವಾರ್ಚನೆ ಮಾಡಿರಿ.




ಮುಂಬರುವ ದಿನಗಳಲ್ಲಿ ಅನುಕೂಲ ಆಗುತ್ತದೆ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಕುಟುಂಬದ ಸದಸ್ಯರ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಸೋದರ/ ಸೋದರಿ ಜತೆಗೆ ಅತಿ ಮುಖ್ಯವಾದ ವಿಚಾರಗಳನ್ನು ಚರ್ಚೆ ಮಾಡುತ್ತೀರಿ.

**ಶುಭದಿನ:** 24 ವಿಷ್ಣು ಸಹಸ್ರನಾಮ ಓದಿರಿ.




ವಾರದ ಮೊದಲ ಭಾಗದಲ್ಲಿ ದೂರದ ಪ್ರದೇಶಗಳಿಗೆ ತೆರಳುವ ಸಂಭವ. ವಾರದ ಅಂತ್ಯಕ್ಕೆ ಸರಿಯುತ್ತಾ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಆಲೋಚನೆ ಮಾಡುತ್ತೀರಿ. ಈ ಮಧ್ಯೆ ನಿಮ್ಮ ವೈಯಕ್ತಿಕ ಸಂಬಂಧದಲ್ಲಿ ಕೆಲ ಗೊಂದಲ ಏರ್ಪಡುತ್ತದೆ.

**ಶುಭದಿನ:** 22 ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಸಂಬಂಧಿಕರ ಭೇಟಿ ಸಾಧ್ಯತೆ. ಕೆಲ ಮುಖ್ಯವಾದ ವಿಚಾರಗಳನ್ನು ಅವರ ಜತೆ ಚರ್ಚೆ ಮಾಡಲಿದ್ದೀರಿ. ಹೆಚ್ಚಿನ ಖರ್ಚು ಆಗಲಿದೆ. ಉದ್ಯೋಗದಲ್ಲಿ ಒತ್ತಡ ಹೆಚ್ಚಾಗುವ ಸಾಧ್ಯತೆಯಿದೆ. ಭೂಮಿ ಖರೀದಿಗೆ ಮನಸ್ಸು ಮಾಡುತ್ತೀರಿ.

**ಶುಭದಿನ:** 20 ದೆವ್ಯಪರಾಧ ಕ್ಷಮಾಪಣಾ ಸ್ತೋತ್ರ ಪಠಣ ಮಾಡಿ.




ವೃತ್ತಿಪರ ಜೀವನದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಕೌಟುಂಬಿಕ ವಿಷಯಗಳಲ್ಲಿ ಪ್ರಗತಿ ಕಾಣಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಕಾಣಿಸುತ್ತದೆ. ನಿಮ್ಮ ಆರೋಗ್ಯ ಕೂಡ ಉತ್ತಮವಾಗಿರುತ್ತದೆ. ಮಕ್ಕಳ ಪ್ರಗತಿ ನಿಧಾನವಾಗಲಿದೆ.

**ಶುಭದಿನ:** 25. ದಕ್ಷಿಣಾಮೂರ್ತಿ ಸ್ತೋತ್ರ ಪಠಣ ಮಾಡಿರಿ.




ಉದ್ಯೋಗಸ್ಥರು ನಿಮಗೆ ವಹಿಸಿದ ಕೆಲಸಗಳನ್ನು ಪೂರೈಸಲು ಯಶಸ್ವಿ ಆಗುತ್ತೀರಿ. ವ್ಯಾಪಾರ ವ್ಯವಹಾರ ಪ್ರಗತಿಗೆ ನಿಮ್ಮ ಶ್ರಮದ ಸಹಾಯ ಆಗುತ್ತದೆ. ನಿಮ್ಮ ಸಿಬ್ಬಂದಿಯ ಆತ್ಮಸ್ಥೈರ್ಯ ಹೆಚ್ಚಿಸುವಲ್ಲಿ ಸಫಲರಾಗುತ್ತೀರಿ. ಪ್ರೋತ್ಸಾಹ ನೀಡುತ್ತೀರಿ.

**ಶುಭದಿನ:** 20 ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಹಣಕಾಸು ಹೂಡಿಕೆಯಲ್ಲಿ ಪ್ರಗತಿ ಕಾಣಲಿದ್ದೀರಿ. ತಲೆನೋವು, ಕಣ್ಣಿಗೆ ಸಂಬಂಧಿಸಿದ ತೊಂದರೆ ಹಾಗೂ ಹಲ್ಲು ನೋವು ಕಾಡಬಹುದು. ಈ ಸಮಸ್ಯೆಗಳಿಗೆ ಆಸ್ಪತ್ರೆಗೆ ಹೋಗುವುದು ಅನಿವಾರ್ಯ. ವೈಯಕ್ತಿಕ ಸಂಬಂಧದಲ್ಲಿ ಆತಂಕ ಸೃಷ್ಟಿ.

**ಶುಭದಿನ:** 23 ಈಶ್ವರನಿಗೆ ರುದ್ರಾಭಿಶೇಕ ಮಾಡಿಸಿ.




ವಾರದ ಶುರುವಿನಿಂದಲೇ ನಿಮ್ಮ ಅದೃಷ್ಟ ಚೆನ್ನಾಗಿದೆ. ನಿಮ್ಮ ಕೆಲಸಗಳು ಪೂರ್ಣಗೊಳ್ಳುವುದು. ಶ್ವಾಸಕೋಶ ಹಾಗೂ ರಕ್ತದ ಸಮಸ್ಯೆಯು ಕಾಣಿಸಿಕೊಳ್ಳಬಹುದು. ತಂದೆ ಜತೆಗೆ ಮನಸ್ತಾಪ. ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು.

**ಶುಭದಿನ:** 22 ಮಾರುತಿ ಗುಡಿಗೆ ಮುಖ ನೋಡಿದ ಎಣ್ಣೆ ನೀಡಿರಿ.




ನಿಮ್ಮ ಶ್ರಮಕ್ಕೆ ಯಶಸ್ಸು ದೊರೆಯುತ್ತದೆ. ನಿಮ್ಮ ಆರೋಗ್ಯ ಚೆನ್ನಾಗಿರುತ್ತದೆ. ವೈವಾಹಿಕ ಜೀವನವು ಸಂತೋಷವಾಗಿ ಇರುತ್ತದೆ. ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ಬಿಕ್ಕಟ್ಟು ಉದ್ಭವಿಸುತ್ತದೆ. ಆರೋಗ್ಯದ ಸಮಸ್ಯೆಗಳು ಎದುರಾಗಬಹುದು.

**ಶುಭದಿನ:** 24 ಸುಬ್ರಹ್ಮಣ್ಯ ಜಪ ಮಾಡಿರಿ.




ನಿಮ್ಮ ಕೆಲಸ ಕಾರ್ಯಗಳನ್ನು ಇನ್ನಷ್ಟು ಒಪ್ಪ ಓರಣವಾಗಿ ಮಾಡಲು ಇನ್ನೂ ಹೆಚ್ಚಿನ ಶ್ರಮ ಹಾಕುತ್ತೀರಿ. ನಿಮ್ಮ ಮೇಲಾಧಿಕಾರಿಗಳು ಸೂಚನೆ ನೀಡಿ, ಕೆಲಸದ ವೇಗವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವಂತೆ ಸೂಚನೆ ನೀಡುತ್ತಾರೆ.

**ಶುಭದಿನ:** 21 ನವದುರ್ಗಾ ಆರಾಧನೆ ಮಾಡಿರಿ.

DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ

